ಮುರಹರ ನಗಧರ ನೀನೆ ಗತಿ

1. **Ref.:** Shri Purandara Dasara Sahitya Part – 1, Pooja Tatva, edited by Shri Betageri Krishna Sharma and Shri Bengeri Huchha Rayaru, page no. 87.
2. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi, page no. 462.
3. **Ref.:** Purandara Sahitya Darshana, Samputa 1, Jeevana Darshana edited by Prof. S.K. Ramachandra Rao, page no. 422.
4. **Note:** The wordings are as per Ref. 1. The lyrics as per Ref. 2 are same as in Ref. 1 except the wordings marked in yellow highlights.
5. **Note:** Singer followed the wordings in Ref. 2.

ರಾಗ ಆರಭಿ ತಾಳ ಆದಿ

ಮುರಹರ ನಗಧರ ನೀನೆ ಗತಿ ॥ ಪ ॥
ಧರಣೀ ಲಕ್ಷ್ಮೀಕಾಂತ ನೀನೆ ಗತಿ ॥ ಅಪ ॥

ಶಕಟ ಮರ್ದನ ಶರಣಾಗತ ವತ್ಸಲ
ಮಕರ ಕುಂಡಲಧರ ನೀನೆ ಗತಿ
ಅಕಳಂಕ ಚರಿತ ಆದಿ ನಾರಾಯಣ
ರುಕುಮಿಣಿ ಪತಿ ಕೃಷ್ಣ ನೀನೆ ಗತಿ ॥ ೧ ॥

ಮನೆ ಮನೆಗಳ ಪೊಕ್ಕು ಕೆನೆ ಹಾಲು ಬೆಣ್ಣೆಯ
(ದಿನ ದಿನ) (ಪ್ರಮಿತ) ಮೆದ್ದ ಹರಿ ನೀನೆ ಗತಿ
ಅನುದಿನ ಭಕುತರ ಬಿಡದೆ ಕಾಯುವ
ಘನ ಮಹಿಮನೆ ಕೃಷ್ಣ ನೀನೆ ಗತಿ ॥ ೨ ॥

ಪನ್ನಗ ಶಯನ ಸುಪರ್ಣಗಮನ
ಪೂರ್ಣ ಚರಿತ ಹರಿ ನೀನೆ ಗತಿ

ಹೊನ್ನ ಹೊಳೆಯಲಿಹ ಪುರಂದರ ವಿಠಲ
ಚೆನ್ನ ಲಕ್ಷ್ಮೀಕಾಂತ ನೀನೆ ಗತಿ ॥ ೩ ॥

ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿಗಳು:

ಬೆಣ್ಣೆಯ ಪ್ರಮಿತ = ಅಪರಿಮಿತವಾಗಿ, ಎಂದರೆ ಬೇಕಾದಷ್ಟು, ಬೆಣ್ಣೆಯನ್ನು.

ಅಕಳಂಕ = ಕಳಂಕವಿಲ್ಲದ, ನಿರ್ಮಲ

ಶಕಟ = ಕೃಷ್ಣನಿಂದ ಹತನಾದ ಒಬ್ಬ ರಾಕ್ಷಸ, ಬಂಡಿ, ಗಾಡಿ

ಮುರಹರ = ಶ್ರೀ ಕೃಷ್ಣ, ಮುರ ಎಂಬ ಅಸುರನು ನರಕಾಸುರನ ಪರಿವಾರದಲ್ಲಿ ಒಬ್ಬ. ಶ್ರೀ ಕೃಷ್ಣ ಇವನನ್ನು ಕೊಂದನು.

ನಗಧರ = ವಿಷ್ಣು

ಸುಪರ್ಣಗಮನ = ಗರುಡಗಮನ, ವಿಷ್ಣು

ಪೂರ್ಣ ಚರಿತ = ಅರಿತುಕೊಳ್ಳಲು ಸಾಧ್ಯವಿರದಂತಹ ಮಹಾಮಹಿಮ

ಹೊನ್ನಹೊಳೆ = ಹೊನ್ನಾಳಿ

Classification: Keerthane
Ankita: purandara vittala
Location: Honnura Pura, near Honnali, Shivamogga Dist., Karnataka State. There is a Chenna Keshava Temple in Belagutti, near Honnali. Probably Dasaru had come there during that time.
Category: Jeevanoddhara, Pooja Tatva
Sub-Category: bhumi, Vishnu, Rukmini, pati, Krishna, benne, bangara, Lakshmi, purna, Narayana, mane, halu,
Pravachana: NA
Explanation: NA